ವರ್ಷದಲ್ಲಿ ಅದ್ಭುತ ಕೆಲಸಗಳು ನಡೆದಿವೆ. ಆದರೆ ಅವರಿಗೆ ಇಲ್ಲದಿದ್ದ ಅನುಕೂಲಗಳು ಈವತ್ತು ನಮಗೆ ಇವೆ.

ಆಸಕ್ತರಿಗೆ ಶಿಬಿರಗಳನ್ನು ನಡೆಸಬೇಕು. ನಮ್ಮ ಪ್ರಾಚೀನ ಸಂಸ್ಕೃತಿ, ಪರಂಪರೆ, ಇತಿಹಾಸಗಳ ಕೊಂಡಿಗಳಾಗಿರುವ ಶಾಸನಗಳು, ಓಲೆಗರಿಗಳನ್ನು ಓದುವುದಕ್ಕೆ ಕಲಿಸಬೇಕು. ಮನೆಗಳಲ್ಲಿ ಮಕ್ಕಳಿಗೆ ಮಾತೃಭಾಷೆಯ ಮೂಲಕ ಹೇಳಿಕೊಡಬೇಕು. ಪಠ್ಯಪುಸ್ತಕಗಳಲ್ಲಿಯೂ ಯಾವುದೇ ಜಾತಿ ಧರ್ಮ ಮತಗಳ ಬಗ್ಗೆ ಯೋಚಿಸದೆ ಸಹಜವಾಗಿ ಮಕ್ಕಳ ಮನಃಸ್ಥಿತಿಗೆ ಎಟುಕುವಂಥ ಪಠ್ಯಗಳನ್ನೇ ಇಡಬೇಕು. ಆಗ ಅವರ ಬೌದ್ಧಿಕ ಬೆಳವಣಿಗೆ ಚೆನ್ನಾಗಿಯೇ ಆಗುತ್ತದೆ.

ವಿಶ್ವವಿದ್ಯಾಲಯಗಳಲ್ಲಿ ಸಾಮಗ್ರಿಗಳು ಕೊಳೆಯುತ್ತಾ ಬಿದ್ದಿವೆ. ಅದನ್ನು ಬಳಸಿಕೊಳ್ಳುವವರಿಲ್ಲ. ಯಾಕಿಲ್ಲ ಎಂದರೆ ಅದಕ್ಕೆ ಬೇಕಾದ ಶಿಕ್ಷಣ ಅವರಿಗಿಲ್ಲ. ಓಲೆಗರಿಯನ್ನು ಓದಲಿಕ್ಕೇ ಬರದವರೆಲ್ಲ ಅದರ ಮೇಲೆ ಪಿಎಚ್.ಡಿ. ಮಾಡುವಂಥ ಪರಿಸ್ಥಿತಿ ಇದೆ.

◆ **ಒಂದು ವಿಷಯದ ಸಂಶೋಧನೆಗೆ ಹತ್ತು ಹಲವು ಶಾಖೆಗಳ ಸಹಾಯ ಬೇಕಾಗುತ್ತದೆ. ಅಲ್ಲಿ ವೈವಿಧ್ಯ ಹೆಚ್ಚು. ಆಧುನಿಕತೆಯ ಮನಸ್ಸೂ ವೈವಿಧ್ಯವನ್ನೇ ಬಯಸುತ್ತದೆ. ಆದರೂ ಸಂಶೋಧನೆ ಎಂದರೆ ಅದೊಂದು ಬರಡು ಕ್ಷೇತ್ರ ಅನ್ನೋ ಭಾವನೆ ಹುಟ್ಟಲು ವಿದ್ವಾಂಸರು ಕಾರಣವೇ ಅಥವಾ ಒಟ್ಟಾರೆ ವ್ಯವಸ್ಥೆ ಕಾರಣವೇ?**

ಇದನ್ನು ಎಲ್ಲ ದೃಷ್ಟಿಯಿಂದಲೂ ನೋಡಬೇಕು. ಕಥೆ ಕಾದಂಬರಿಗಳಿಗೆ ಇರುವ ಪ್ರೋತ್ಸಾಹ ಸಂಶೋಧನೆಗೆ ಇಲ್ಲ. ಕಥೆ, ಕಾದಂಬರಿ ಬರೆದರೆ ಆಹಾ ಓಹೋ ಎಂದು ಹಾಡಿ ಹೊಗಳಬಹುದು. ಆದರೆ ಸಂಶೋಧಕ ಎಷ್ಟೇ ಕಷ್ಟಪಟ್ಟು ಬರೆದರೂ ಅದಕ್ಕೆ ಬೆಲೆ ಇಲ್ಲ ಅನ್ನೋ ಪರಿಸ್ಥಿತಿ ನಿರ್ಮಾಣ ಆಗುವುದಕ್ಕೆ ನಮ್ಮ ಸಂಶೋಧನಾ ವಲಯವೂ ಒಂದು ಕಾರಣ. ಆದ್ಯವತ್ತಾದ ಶೋಧನೆಗಳನ್ನು ಪರಿಗ್ರಹಿಸುವುದಿಲ್ಲ. ಜಾತಿ ಧರ್ಮಾಧಾರಿತ ವಿಷಯಗಳು ಬಂದು ಸಂಶೋಧನೆಗಳು ಕುಂಠಿತವಾಗುತ್ತದೆ. ನೈಜ ವಿದ್ವಾಂಸರು ಒಬ್ಬಂಟಿಯಾಗಿ ಹೋರಾಟ ಮಾಡಬೇಕಾಗುತ್ತದೆ. ಅದರಿಂದ ಆ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ನಡೆಯದೇ ಅದು ಬರಡು ಎಂಬ ಭಾವನೆ ಬರುತ್ತದೆ. ಈ ಭಾವನೆಯನ್ನು ಹೋಗಲಾಡಿಸುವುದು ಸಂಶೋಧಕರ ಕೈಯಲ್ಲಿಯೇ ಇದೆ.

◆ **ಈಗ ಸಂಶೋಧನಾ ಲೇಖನಗಳು ಪ್ರಕಟವಾಗುವುದಕ್ಕೆ ತಕ್ಕ ಪತ್ರಿಕೆಗಳು ಇವೆಯಾ?**

ಈಗ ತುಂಬ ಕಡಿಮೆ ಆಗಿಹೋಗಿದೆ. ಅವರ ಧೋರಣೆಗೆ ಒಪ್ಪಲಿಲ್ಲ ಅಂದ್ರೆ ಪ್ರಕಟ ಮಾಡುವುದೇ ಇಲ್ಲ. 'ಪ್ರಬುದ್ಧ ಕರ್ನಾಟಕ' ಹಲವರನ್ನು ಬೆಳೆಸಿದ ಪತ್ರಿಕೆ. ಈವತ್ತು ಬರ್ತಿಲ್ಲ; ಅಥವಾ ಯಾವಾಗಲೋ ನಾಲ್ಕು ವರ್ಷಕ್ಕೊಂದು ಸಲ ಸಂಯುಕ್ತ ಸಂಚಿಕೆಯಾಗಿ ಬರ್ತಿದೆಯಂತೆ. 'ಮಾನವಿಕ ಕರ್ನಾಟಕ' ಬರ್ತಾ ಇಲ್ಲ. ಸಾಹಿತ್ಯ ಪರಿಷತ್ ಪತ್ರಿಕೆಯೂ ಸಮಯಕ್ಕೆ ಸರಿಯಾಗಿ ಬರ್ತಿಲ್ಲ.

ದಿನಪತ್ರಿಕೆಗಳೂ ಮೊದಲು ಇತಿಹಾಸದ ವಿವರಗಳನ್ನು ಪ್ರಕಟಿಸಿದ ರೀತಿಯಲ್ಲಿ ಈಗ ಪ್ರಕಟಿಸುತ್ತಿಲ್ಲ. ಉದಾಹರಣೆಗೆ 'ಪ್ರಜಾವಾಣಿ' ಪತ್ರಿಕೆಯಲ್ಲಿಯೇ ಇತಿಹಾಸ ತಜ್ಞ ಡಾ. ಎಸ್. ಶ್ರೀಕಂಠಶಾಸ್ತ್ರಿಗಳ ಲೇಖನಗಳು ಸರಣಿಯಾಗಿ ಪ್ರಕಟವಾಗಿದ್ದವು. 'ಕನ್ನಡ ಪ್ರಭ'ದಲ್ಲಿ ಹಿಂದೆ ಎರಡು ತಾಮ್ರಶಾಸನಗಳು ಪಾಠದ ಸಮೇತ ಪ್ರಕಟವಾಗಿದ್ದವು. ಆ ಮಟ್ಟದ ಲೇಖನಗಳು ಈಗ ಯಾವ ಪತ್ರಿಕೆಗಳಲ್ಲಿಯೂ ಕಾಣುತ್ತಿಲ್ಲ. ಹಾಗಾಗಿ ಸಹಜವಾಗಿಯೇ ಸಂಶೋಧನಾ ಪ್ರಬಂಧಗಳ ಪ್ರಕಟಣೆ ಸಹಜವಾಗಿಯೇ ಕಡಿಮೆ ಆಗುತ್ತಿದೆ. ●